**ಗಣತಿ ಆಧಾರಿತ ರಾಜ್ಯ ಸಾಧನಾ ಸಮೀಕ್ಷೆ-2017**

**ಪೂರ್ವ ಸಿದ್ಧತಾ ಪರೀಕ್ಷೆ ಪ್ರಶ್ನೆಪತ್ರಿಕೆ**

**ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ________________________________________**

**ಅಂಕಗಳು: 30**

**ತರಗತಿ: 6** **ಕನ್ನಡ** **ಸಮಯ: 45 ನಿಮಿಷಗಳು**

**ಸೂಚನೆಗಳು**

- **ಸರಿಯಾದ ಉತ್ತರಕ್ಕೆ ನಿಮಗೆ ನೀಡುವ OMR ಹಾಳೆಯಲ್ಲಿ ಪ್ರತಿ ಪ್ರಶ್ನೆಗೆ ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಆಯ್ಕೆಗೆ ನೀಲಿ ಅಥವಾ ಕಪ್ಪು ಬಾಲ್ ಪೆನ್ ನಿಂದ ಶೇಡ್ ಮಾಡಿ**
- **ಒಂದು ಪ್ರಶ್ನೆಗೆ ಒಂದಕ್ಕಿಂತ ಹೆಚ್ಚು ಉತ್ತರಗಳಿಗೆ ಶೇಡ್ ಮಾಡಬಾರದು**

1. ಪುಸ್ತಕದ ಪುಟಗಳನ್ನು ಹರಿದ ಮಕ್ಕಳಿಗೆ ರಾಜೇಂದ್ರಪ್ರಸಾದರು ಏನನ್ನು ಕೊಟ್ಟರು? 18x1=18

   **a.** ಏಟು b. ಕಾಸು c. ಹಣ್ಣು d. ಹೂವು

2. ಜಾಕಿರ್ ಹುಸೇನರು ಮಕ್ಕಳಿಗೆ ಬುದ್ಧಿ ಕಲಿಸಲು ಯಾವ ವೇಶ ಹಾಕಿದರು?

   a. ಬೂಟ್ ಪಾಲಿಶ್ ಮಾಡುವವನ ವೇಶ b. ವಾಚ್ ಮನ್ ವೇಶ c. ಪೋಲೀಸ್ ವೇಶ d. ವ್ಯಾಪಾರಿ ವೇಶ

3. ಅನ್ವರ್ಥ ನಾಮಕ್ಕೆ ಇದು ಒಂದು ಉದಾಹರಣೆ

   a. ಆನಂದ b. ಮೈಸೂರು c. ಶಿಕ್ಷಕ d. ನದಿ

4. ಹ್ರಸ್ವ ಸ್ವರಗಳ ಸಂಖ್ಯೆ ಎಷ್ಟು?

   a. ೫ b. ೭ c. ೯ d. ೬

5. ರಾಜನು ________ ವನ್ನು ಪರಿಸಮಾಪ್ತಿಗೊಳಿಸಿದ.

   a. ಒಡ್ಡೋಲಗ b. ಬಡ್ಡೋಲಗ c. ಓಡ್ಡೋಲಗ d. ವಡ್ಡೋಲಗ

6. 'ಕೇಳದ ಕಿವಿ ಊರಿಗೆ ಮಾರಿ ತಂದಿತು' ಈ ಮಾತನ್ನು ಹೇಳದವರು ಯಾರು?

   a. ಸೇವಕ b. ಮಂತ್ರಿ c. ಪಡೆಯ ಮುಖ್ಯಸ್ಥ d. ಮಡಿವಾಳ್ತಿ

7. ಚಿನ್ನದ ಪೆಟ್ಟಿಗೆಯಲ್ಲಿ ಬೆಳ್ಳಿ ಲಿಂಗ ಈ ಒಗಟಿಗೆ ಉತ್ತರ

   a. ಮೊಟ್ಟೆ b. ಹಲಸಿನ ಹಣ್ಣು c. ಕಡಲೆಕಾಯಿ d. ಗೆಣಸು

8. 'ಅಣ್ಣ' ಈ ಪದದ ಬಹುವಚನ ರೂಪ

   a. ಅಣ್ಣರು b. ಅಣ್ಣಂದಿರು c. ಅಣ್ಣಗಳು d. ಅಣ್ಣ

9. 'ದೇಶವನ್ನು' ಈ ಪದದಲ್ಲಿರುವ ವಿಭಕ್ತಿ ಯಾವುದು?

   a. ಪ್ರಥಮ b. ತೃತೀಯ c. ದ್ವಿತೀಯ d. ಷಷ್ಟಿ

10. ಭೂಮಿಯ ಪೋಷಕ

    a. ಸೂರ್ಯ b. ಬಾನು c. ಚಂದ್ರ d. ಮೋಡ

11. ವಿಜಾತೀಯ ವತ್ತಕ್ಷರವುಳ್ಳ ಪದಕ್ಕೆ ಉದಾಹರಣೆ

    a. ಹಗ್ಗ b. ಸುಣ್ಣ c. ಅಕ್ಕ d. ಶಕ್ತಿ

12. ಪುಟ್ಟಿ ಜನರಲ್ಲಿ ಏನನ್ನು ಉಳಿಸಲು ಬೇಡಿದಳು?

a. ಹಣ  b. ಆಹಾರ  c. ಹಸಿರು  d. ನೀರು

13. ಅನುಕರಣಾವ್ಯಯಕ್ಕೆ ಒಂದು ಉದಾಹರಣೆ

a. ಪಟಪಟ  b. ದೊಡ್ಡದೊಡ್ಡ  c. ನೋವುನಲಿವು  d. ಕಾಡುಮೇಡು

14. ಯಾರಿಗಾಗಿ ಶ್ರೀಕೃಷ್ಣನ ಬಳಿ ಸಹಾಯ ಕೇಳಲು ಸುಧಾಮನ ಪತ್ನಿ ಹೇಳುತ್ತಾಳೆ?

a. ತನಗಾಗಿ  b. ಸುಧಾಮನಿಗಾಗಿ  c. ಮಕ್ಕಳಿಗಾಗಿ  d. ಬಡವರಿಗಾಗಿ

15. "ನನ್ನನ್ನು ಕಂಡರೆ ಅವನಿಗೆ ಅಪಾರ ಪ್ರೀತಿ, ಸ್ನೇಹ, ಗೌರವ" ಈ ಮಾತನ್ನು ಯಾರು ಹೇಳಿದರು?

a. ಸುಧಾಮ  b. ಶ್ರೀಕೃಷ್ಣ  c. ಮಗ  d. ರುಕ್ಮಿಣಿ

16. 'ಅಟ್ಟಕ್ಕೇರಿಸು' ಈ ನುಡಿಗಟ್ಟಿನ ಅರ್ಥ

a. ಅಟ್ಟವನ್ನು ಹತ್ತಿಸು  b. ಹೊಗಳಿಹೊಗಳಿ ಉಬ್ಬಿಸು  c. ಅಟ್ಟದ ಮೇಲಿಡು  d. ಅಟ್ಟಕ್ಕೆ ಜೋಡಿಸು

17. ಡಾ॥ ರಾಜಕುಮಾರ್ ರವರು ಮೊದಲು ನಾಯಕ ನಟರಾಗಿ ಅಭಿನಯಿಸಿದ ಸಿನಿಮಾ ಯಾವುದು?

a. ಬೇಡರ ಕಣ್ಣಪ್ಪ  b. ಕೃಷ್ಣಗಾರುಡಿ  c. ಶ್ರೀನಿವಾಸ ಕಲ್ಯಾಣ  d. ಭಕ್ತ ವಿಜಯ

18. 'ಸಿರಿಗನ್ನಡ' ಈ ಪದದಲ್ಲಿ ಬರುವ ಸಂಧಿಯನ್ನು ಗುರ್ತಿಸಿ

a. ಆದೇಶಸಂಧಿ  b. ಆಗಮಸಂಧಿ  c. ಗುಣಸಂಧಿ  d. ಲೋಪಸಂಧಿ

19. ಪದ್ಯದ ಸರಿಯಾದ ರೂಪ ಗುರ್ತಿಸಿ 6x2=12

a. ಚಂದ್ರನ ಮೇಲೆ ನೆಟ್ಟಗೆ ನಿಂತು
ಭೂಮಿಯ ಕಡೆಗೆ ನೋಡಿದರೆ
ನೇರಳೆ ಬಣ್ಣದ ಚೆಂಡಿನ ಹಾಗೆ
ಕಂಡಿತು ಅವಳಿಗೆ ನಮ್ಮ ಧರೆ

b. ನೇರಳೆ ಬಣ್ಣದ ಚೆಂಡಿನ ಹಾಗೆ
ಕಂಡಿತು ಅವಳಿಗೆ ನಮ್ಮ ಧರೆ
ಭೂಮಿಯ ಕಡೆಗೆ ನೋಡಿದರೆ
ಚಂದ್ರನ ಮೇಲೆ ನೆಟ್ಟಗೆ ನಿಂತು

c. ಚಂದ್ರನ ಮೇಲೆ ನೆಟ್ಟಗೆ ನಿಂತು
ನೇರಳೆ ಬಣ್ಣದ ಚೆಂಡಿನ ಹಾಗೆ
ಭೂಮಿಯ ಕಡೆಗೆ ನೋಡಿದರೆ
ಚಂದ್ರನ ಮೇಲೆ ನೆಟ್ಟಗೆ ನಿಂತು
ಕಂಡಿತು ಅವಳಿಗೆ ನಮ್ಮ ಧರೆ

d. ಕಂಡಿತು ಅವಳಿಗೆ ನಮ್ಮ ಧರೆ
ಭೂಮಿಯ ಕಡೆಗೆ ನೋಡಿದರೆ
ಚಂದ್ರನ ಮೇಲೆ ನೆಟ್ಟಗೆ ನಿಂತು
ನೇರಳೆ ಬಣ್ಣದ ಚೆಂಡಿನ ಹಾಗೆ
ಕಂಡಿತು ಅವಳಿಗೆ ನಮ್ಮ ಧರೆ

20. ಚಿನ್ನಣ್ಣ ವಾಲೀಕಾರ ಕವಿ ಬರೆದಿರುವ ಪದ್ಯ ಗುರ್ತಿಸಿ

a. ಬಿಳಿಯರ ಗುಂಡಿಗೆ ಬೆದರದ ಗಂಡೆದೆ
ತೋರಿದ ಗಟ್ಟಿಗ ನೇತಾಜಿ

b. ಎಲ್ಲಿ ಕೇಳಿದರಲ್ಲಿ ಬೂಟುಗಾಲಿನ ಸದ್ದು
ತರತರದ ನೋವುಗಳು ನಮಗ

c. ಕಿತ್ತಲೆಯ ಹಾಗೆ, ಮೋಸಂಬಿ ಹಾಗೆ
ರಸಪೂರಿ ಮಾವಿನ ಹಣ್ಣಿನಂತೆ

d. ಏಕೆ ರವಿಗಿಂತ ತಾಪ?
ಯಾರ ಮೇಲವನ ಕೋಪ?

21. "ಪಕ್ವತನ ಬಿರಿದ ಬಾಳೆಹಣ್ಣಿದೆಯಲ್ಲ ಅದರ ಹಾಗೇ ಕೊಂಚ ಬಾಗ ಬೇಕು" ಈ ಪದ್ಯದ ಸಾರಾಂಶ ಗುರ್ತಿಸಿ

a. ಮಾವಿನ ಹಣ್ಣು ಹಣ್ಣಾಗಿ ಮಾಗುವಂತೆ ನಮ್ಮ ಜೀವನವು ಅನುಭವಗಳಿಂದ ಪಕ್ವವಾಗಬೇಕು.

b. ಹಣ್ಣಾದ ಬಾಳೆಹಣ್ಣಿನ ಗೊನೆ ಇರುವ ಗಿಡ ಬಾಗುವಂತೆ ನಾವು ಸಹ ಒಳ್ಳೆಯದಕ್ಕೆ ತಲೆಬಾಗಬೇಕು

c. ಕಿತ್ತಲೆ ಮೋಸಂಬಿಯ ಹಾಗೆ ಜನರ ಕಣ್ಣಿಗೆ ಅಪರೂಪವಾಗಿ ಕಾಣಬೇಕು

d. ನಾವು ಜನರ ಕಣ್ಣಿಗೆ ಕಲ್ಲಂಗಡಿ ಹಣ್ಣು ಕಾನುವ ರೀತಿ ಕಾಣಬೇಕು

22. ಕ್ರಮಬದ್ಧವಾಗಿರುವ ಘಟನೆಯನ್ನು ಗುರ್ತಿಸಿ

a. ಇವರಿಗೆ ಮುತ್ತುರಾಜ ಎಂದು ನಾಮಕರಣ ಮಾಡಲಾಯಿತು
ಇವರು ನಾಯಕರಾಗಿ ಅಭಿನಯಿಸಿದ ಮೊದಲ ಚಿತ್ರ ಬೇಡರ ಕಣ್ಣಪ್ಪ
ಡಾ॥ ರಾಜಕುಮಾರ್ ರವರು 1929 ಏಪ್ರಿಲ್ 24 ರಂದು ಜನಿಸಿದರು
1979 ರಲ್ಲಿ ಮೈಸೂರು ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ನೀಡಿತು.

b. ಡಾ॥ ರಾಜಕುಮಾರ್ ರವರು 1929 ಏಪ್ರಿಲ್ 24 ರಂದು ಜನಿಸಿದರು
1979 ರಲ್ಲಿ ಮೈಸೂರು ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ನೀಡಿತು.
ಇವರಿಗೆ ಮುತ್ತುರಾಜ ಎಂದು ನಾಮಕರಣ ಮಾಡಲಾಯಿತು
ಇವರು ನಾಯಕರಾಗಿ ಅಭಿನಯಿಸಿದ ಮೊದಲ ಚಿತ್ರ ಬೇಡರ ಕಣ್ಣಪ್ಪ

c. ಡಾ॥ ರಾಜಕುಮಾರ್ ರವರು 1929 ಏಪ್ರಿಲ್ 24 ರಂದು ಜನಿಸಿದರು
ಇವರಿಗೆ ಮುತ್ತುರಾಜ ಎಂದು ನಾಮಕರಣ ಮಾಡಲಾಯಿತು
ಇವರು ನಾಯಕರಾಗಿ ಅಭಿನಯಿಸಿದ ಮೊದಲ ಚಿತ್ರ ಬೇಡರ ಕಣ್ಣಪ
1979 ರಲ್ಲಿ ಮೈಸೂರು ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ನೀಡಿತು

d. 1979 ರಲ್ಲಿ ಮೈಸೂರು ವಿಶ್ವವಿದ್ಯಾಲಯವು ಗೌರವ ಡಾಕ್ಟರೇಟ್ ನೀಡಿತು.
ಇವರು ನಾಯಕರಾಗಿ ಅಭಿನಯಿಸಿದ ಮೊದಲ ಚಿತ್ರ ಬೇಡರ ಕಣ್ಣಪ್ಪ
ಡಾ॥ ರಾಜಕುಮಾರ್ ರವರು 1929 ಏಪ್ರಿಲ್ 24 ರಂದು ಜನಿಸಿದರು
ಇವರಿಗೆ ಮುತ್ತುರಾಜ ಎಂದು ನಾಮಕರಣ ಮಾಡಲಾಯಿತು

23. 'ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ' ಈ ಗಾದೆಯ ಅರ್ಥವನ್ನು ಗುರ್ತಿಸಿ

a. ನಮಗೆ ದೂರದಲ್ಲಿ ಕಾಣುವ ಬೆಟ್ಟ ನಯವಾಗಿ ಕಾಣುತ್ತದೆ

b. ನಮಗೆ ಗೊತ್ತಿಲ್ಲದ ವಿಷಯಗಳು ಕಷ್ಟ ಎನಿಸುತ್ತವೆ

c. ದೂರದಲ್ಲಿರುವ ವಸ್ತುಗಳು ಅಂದವಾಗಿಲ್ಲದಿದ್ದರೂ ಕಣ್ಣಿಗೆ ಅಂದವಾಗೇ ಕಾಣುತ್ತವೆ

d. ದೂರದಲ್ಲಿರುವ ಬೆಟ್ಟ ನುಣುಪಾಗಿ ಕಾಣುತ್ತದೆ

24. ರಾಜೇಂದ್ರ ಪ್ರಸಾದರು ಮಕ್ಕಳೇ, ನೋಡಿ ಇಲ್ಲಿ ಎಷ್ಟೊಂದು ಕಾಗದಗಳು ಹರಿದುಹೋಗಿವೆ. ನಿಮ್ಮಲ್ಲಿ ಯಾರು ಯಾರು ಎಷ್ಟೆಷ್ಟು ಪುಟಗಳನ್ನು ಹರಿದಿದ್ದೀರಾ – ಈ ವಾಕ್ಯಕ್ಕೆ ಹಾಕಬೇಕಾದ ಲೇಖನ ಚಿಹ್ನೆಗಳನ್ನು ಗುರ್ತಿಸಿ

a. ಉದ್ಧರಣ ಚಿಹ್ನೆ, ಪ್ರಶ್ನಾರ್ಥಕ ಚಿಹ್ನೆ　　b. ಅಲ್ಪವಿರಾಮ, ಪೂರ್ಣವಿರಾಮ

c. ಆಶ್ಚರ್ಯಸೂಚಕ ಚಿಹ್ನೆ, ಪ್ರಶ್ನಾರ್ಥಕ ಚಿಹ್ನೆ　　d. ಅರ್ಧವಿರಾಮ, ಉದ್ಧರಣ ಚಿಹ್ನೆ

******